# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.353-2020** **ಡಿ . ಡಬ್ಲುಃ 4**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎಂ.ಎಸ್.ಮಂಜೇಗೌಡ<br>ಮಳ್ಳರದಹುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 02-02-2025. |

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಆರ್.ಎನ್ ವಕೀಲರಿಂದಃ</u>**

ವಾದಿಯವರು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ಭಾಗಕ್ಕಾಗಿ ಸಲ್ಲಿಸಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ಹುಚ್ಚಗಣ್ಣಿ ಗ್ರಾಮದಲ್ಲಿ ಇರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ಯಾರಿಗೆ ಸೇರಿದ್ದು ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿ ಸ್ವಾಮಿಗೌಡ ರವರ ಅಜ್ಜಿ ಅವರ ತಾಯಿಗೆ ನೀಡಿದ ಸ್ವತ್ತಾಗಿರುತ್ತದೆ. ಪ್ರತಿವಾದಿಯವರ ತಾಯಿ ಪುಟ್ಟಮ್ಮ ರವರು ಮರಳ್ಳದಹುಂಡಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ಪುಟ್ಟಮ್ಮ ರವರಿಗೆ ಅವರ ತಾಯಿಯಿಂದ ಬಂದ ಆಸ್ತಿ ಆದ ಕಾರಣ ಅದು ಅವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಪುಟ್ಟಮ್ಮ ರವರು ತನ್ನ ಸ್ವಯಾರ್ಜಿತ ಆಸ್ತಿಯನ್ನು ತನ್ನ ಮಗನಿಗೆ ಹಕ್ಕು ಖುಲಾಸೆ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಮ್ಮ ರವರು ತನ್ನ ಸ್ವಯಾರ್ಜಿತ ಸ್ವತ್ತನ್ನು ತನ್ನ ಮಗ ನಾಗೇಗೌಡ ರವರ ಹೆಸರಿಗೆ

ಮಾಡಿಕೊಟ್ಟ ನಂತರ, ನಾಗೇಗೌಡ ರವರು ಸದರಿ ಸ್ವತ್ತನ್ನು ತನ್ನ ಮಗಳಾದ ವಾದಿ ಯವರಿಗೆ ದಾನ ಪತ್ರದ ಮುಖೇನ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾಗೇಗೌಡ ರವರು ಸ್ವತ್ತನ್ನು ತನ್ನ ಮಗಳಿಗೆ ದಾನ ಪತ್ರದ ಮುಖೇನ ನೀಡಿದ ನಂತರದಿಂದ ಸದರಿ ಸ್ವತ್ತಿನ ಖಾತೆ, ಎಂ.ಆರ್ ಮತ್ತು ಪಹಣಿ ವಾದಿ ಮಂಜುಳ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಸಾಕ್ಷಿಯನ್ನು ನುಡಿಯಲು ಬರುವ ಮುಂಚೆ ಈ ವಿಷಯದ ಬಗ್ಗೆ ತಿಳಿದುಕೊಂಡು ಬರಲು ನಿಮಗೆ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಯಾವುದೇ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿ ಈ ದಾವಾವನ್ನು ಪ್ರತಿವಾದಿ ವಿರುದ್ಧ ಸಲ್ಲಿಸಿದ್ದಾರೆ ಎಂಬ ವಿಚಾರ ವಿಭಾಗ ಪತ್ರ ಆದ ಬಳಿಕ ಪ್ರತಿವಾದಿ ಹೇಳಿದ್ದರಿಂದ ನನಗೆ ಗೊತ್ತಾಯಿತು.

2. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ವಿಭಜನೆ ಪತ್ರವನ್ನು ಪತ್ರ ಬರಹಗಾರರು ಬರೆದಿರುತ್ತಾರೆ. ಪತ್ರಬರಹಗಾರರ ಹೆಸರು ನನಗೆ ಗೊತ್ತಿಲ್ಲ. ಆದರೆ ಅವರು ಹೆಚ್.ಡಿ.ಕೋಟೆಯವರು. ವಿಭಾಗ ಪತ್ರವನ್ನು ಬರೆಯುವ ಸಮಯ ನಾನು, ಪ್ರತಿವಾದಿ ಮತ್ತು ಲಿಂಗರಾಜು ಇದ್ದೆವು. ವಿಭಾಗ ಪತ್ರವಾದ ಸಮಯ ನಮ್ಮಗಳನ್ನು ಹೊರತುಪಡಿಸಿ ಪ್ರತಿವಾದಿಯವರ ಕುಟುಂಬದವರು ಯಾರು ಇರಲಿಲ್ಲ ಎಂದರೆ ಸರಿ. ಸದರಿ ವಿಭಾಗದಲ್ಲಿ ಪತ್ರಕ್ಕೆ ನನ್ನ ಸಮಕ್ಷಮ ಸಹಿಯನ್ನು ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮತ್ತು

ಪತ್ರಬರಹಗಾರರ ಸಮಕ್ಷಮ ಸಹಿಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪಾಲು–ಪಾರಿಕತ್ತಿಗೆ ಪ್ರತಿವಾದಿ ಸ್ವಾಮಿಗೌಡ ರವರು ಮಾತ್ರ ಸಹಿ ಮಾಡಿದ್ದು, ಇತರರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದರೆ ಸರಿ. ನಾಗೇಗೌಡ ರವರು ಎಂದಿಗೂ ಸಹ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕುವುದಿಲ್ಲ, ಅವರು ಸಹಿ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ಪಾಲು–ಪಾರಿಕತ್ತಿಗೆ ನಾನು, ಪ್ರತಿವಾದಿಯವರ ಕುಟುಂಬದ ಗಂಡಸರು ಪತ್ರ ಬಹರಗಾರರ ಸಮಕ್ಷಮ ಸಹಿಯನ್ನು ಹಾಕಿರುತ್ತಾರೆ. ಆದರೆ ಹೆಣ್ಣು ಮಕ್ಕಳು ಆ ಪತ್ರವನ್ನು ಮನೆಗೆ ಬಂದ ಬಳಿಕ ಸಹಿ ತಮ್ಮ ಮಾಡಿರುತ್ತಾರೆ. ಸದರಿ ಪಾಲು–ಪಾರಿಕತ್ತಿನ ವಿಚಾರ ನಾಗೇಗೌಡ ರವರಿಗೆ ಗೊತ್ತಿರುವುದಿಲ್ಲ, ಅವರು ಪತ್ರವಾದ ದಿನ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಪತ್ರ ನೋಂದಣಾಧಿಕಾರಿಯವರ ಕಚೇರಿಯಲ್ಲಿ ನೋಂದಣಾಧಿಕಾರಿಯವರ ಸಮಕ್ಷಮದಲ್ಲಿ ಆಗಿಲ್ಲದೇ ಇದ್ದಲ್ಲಿ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ ಎಂದರೆ ಸರಿ. ಆ ಸಮಯ ನೀವು ವಿಭಾಗ ಪತ್ರಕ್ಕೆ ನೋಂದಣಾಧಿಕಾರಿಯವರ ಕಚೇರಿಗೆ ಹೋಗದೆ ಸಹಿ ಮಾಡಿದರೆ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ ಎಂದು ನೀವು ಸಲಹೆ ಕೊಟ್ಟಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಯಾವುದೇ ಸಲಹೆಯನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

3. ನಿಡಿ-8 ರಲ್ಲಿ ಪತ್ರವನ್ನು ಯಾವ ಪತ್ರಬರಹಗಾರರು ಬರೆದರು ಮತ್ತು ಅವರ ಹೆಸರು, ಮೊಹರು ಮತ್ತು ಸಹಿ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅದು ಪತ್ರವನ್ನು ಬರಸಿಕೊಂಡವರು ಈ ಎಲ್ಲಾ ವಿಚಾರದ ಬಗ್ಗೆ ಜಾಗೃತಿಯನ್ನು ವಹಿಸಬೇಕು ಎಂದು ನುಡಿಯುತ್ತಾರೆ. ಆಗಾಗಿ ನಿಡಿ-8 ಪಾಲು-ಪಾರಿಕತ್ತನ್ನು ನಾನು ಮತ್ತು ಪ್ರತಿವಾದಿ ಸ್ವಾಮಿಗೌಡ ರವರು ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**